ಎಂ.ಟಿ. ಸಂಖ್ಯೆ: 3 ೦\೪/2026

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಕಛೇರಿ,
ಕೋಲಾರ, ದಿನಾಂಕ: 10-08-2026

ಟೆಂಡರ್ ಅಧಿಸೂಚನೆ

ಮುಚ್ಚಿದ ಲಕೋಟೆಯಲ್ಲಿ ಕೋಲಾರ ನ್ಯಾಯಾಲಯಗಳ ಸಮುಚ್ಚಯದಲ್ಲಿರುವ ಸಾರ್ವಜನಿಕರ ಉಪಯೋಗಕ್ಕಾಗಿ ಮೀಸಲಿಟ್ಟಿರುವ ನವೀಕೃತ ಪುರುಷರ ಹಾಗೂ ಮಹಿಳೆಯರ ಶೌಚಾಲಯಗಳ ನಿರ್ವಹಣೆಗಾಗಿ ಪಾವತಿ ಮತ್ತು ಉಪಯೋಗಿಸುವ (Pay and Use) ಆಧಾರದ ಮೇರೆಗೆ ಆಸಕ್ತ ನೊಂದಾಯಿತ ಪಾವತಿ ಮತ್ತು ಉಪಯೋಗಿಸುವ ಶೌಚಾಲಯಗಳನ್ನು ನಿರ್ವಹಿಸುವ ಸಂಸ್ಥೆಗಳಿಂದ ಒಂದು ವರ್ಷದ ಅವಧಿಗೆ ಗುತ್ತಿಗೆಗೆ ನೀಡಲು ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ಟೆಂಡರುಗಳನ್ನು ಆಹ್ವಾನಿಸಿದೆ.

ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ 27-08-2026 ಸಂಜೆ 5-00 ಘಂಟೆಯಾಗಿರುತ್ತದೆ.
ಟೆಂಡರ್ ತೆರಯಲು ಹಾಗೂ ತಾಂತ್ರಿಕ ಮತ್ತು ಹಣಕಾಸಿನ ಬಿಡ್ ಪರಿಶೀಲಿಸಲು ನಿಗದಿಪಡಿಸಿದ
ದಿನಾಂಕ 27-08-2026 ರ ಸಂಜೆ 5-30 ಘಂಟೆಯಾಗಿರುತ್ತದೆ.

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ವ್ಯಕ್ತಿ/ಸಂಸ್ಥೆಗಳು ತಾವು ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಅಥವಾ ನಿರ್ವಹಿಸಿರುವ ಇಂತಹುದು ಕಾರ್ಯಗಳನ್ನು ನಿರ್ವಹಿಸಿರುವ ಬಗ್ಗೆ, ಸಂಸ್ಥೆ ನೊಂದಣಿ ಆಗಿರುವ ಬಗ್ಗೆ ದಾಖಲೆಯನ್ನು ಸಲ್ಲಿಸಬೇಕು.

ಷರತ್ತು ಮತ್ತು ನಿಬಂಧನೆಗಳು:

1) ಟೆಂಡರಿನಲ್ಲಿ ಭಾಗವಹಿಸಲು ಇಚ್ಚಿಸುವ ವ್ಯಕ್ತಿ /ಸಂಸ್ಥೆಗಳು, ನೊಂದಾಯಿತ ಸಂಸ್ಥೆಗಳಾಗಿರಬೇಕು.. ಪಾವತಿ ಮತ್ತು ಉಪಯೋಗಿಸುವ ಸೇವಾ ಕಾರ್ಯದ ಗುತ್ತಿಗೆ ಕೆಲಸಗಳನ್ನು ನಿರ್ವಹಿಸುತ್ತಿರುವ ಸಂಸ್ಥೆಗಳಾಗಿರಬೇಕು.

2) ಶೌಚಾಲಯ ಕಟ್ಟಡದ ಪಾವತಿ ಮತ್ತು ಉಪಯೋಗಿಸುವ ಅಧಾರದ ಮೇಲಿನ ಗುತ್ತಿಗೆಯನ್ನು ಒಂದು ವರ್ಷದ ಅವಧಿಗೆ ಮಾತ್ರ ನೀಡಲಾಗುವುದು. ಅಗತ್ಯವಾದಲ್ಲಿ ಸದರಿ ಗುತ್ತಿಗೆಯನ್ನು ಇನ್ನೂ ಹೆಚ್ಚಿನ ಅವಧಿಗೆ ಒಪ್ಪಿತ ಮೊತ್ತಕ್ಕೆ ಮುಂದುವರೆಸಬಹುದು.

3) ಶೌಚಾಲಯ ಕಟ್ಟಡವನ್ನು ಕಾರ್ಯದೇಶ ನೀಡಿ ವ್ಯಕ್ತಿ/ಸಂಸ್ಥೆಯ ವಶಕ್ಕೆ ನೀಡಿದ ಒಂದು ವರ್ಷ ಅವಧಿ ಅಥವಾ ಹೆಚ್ಚುವರಿ ಅವಧಿಯಲ್ಲಿ ಉತ್ತಮ ಸ್ಥಿತಿಯಲ್ಲಿ ನೈರ್ಮಲ್ಯ, ಶುಚಿತ್ವವನ್ನು ಕಾಪಾಡಿಕೊಳ್ಳಬೇಕು. ಇಲ್ಲವಾದಲ್ಲಿ ಯಾವುದೇ ನೋಟಿಸು ನೀಡದೆ ಗುತ್ತಿಗೆಯನ್ನು ರದ್ದುಪಡಿಸಲಾಗುವುದು..

4) ಗುತ್ತಿಗೆ ಅವಧಿ ಮುಗಿದ ನಂತರ ಸದರಿ ಶೌಚಾಲಯ ಕಟ್ಟಡವನ್ನು ಉತ್ತಮಸ್ಥಿತಿಯಲ್ಲಿ ಹಿಂತಿರುಗಿಸಬೇಕು. ಇಲ್ಲವಾದಲ್ಲಿ ಮುಂಗಡ ಹಣದಲ್ಲಿ ರಿಪೇರಿ ಅಥವಾ ಇತರೆ ಖರ್ಚುಗಳನ್ನು ಕಳೆದು ಉಳಿಕೆ ಹಣವನ್ನು ಹಿಂತಿರುಗಿಸಲಾಗುವುದು.

5) ಗುತ್ತಿಗೆ ಅವಧಿಯಲ್ಲಿ ಶೌಚಾಲಯದ ಕಟ್ಟಡ, ನೀರಿನ ಪೈಪ್‌ಗಳು, ಪಿಟ್ಟಿಂಗಗಳು, ಡೋರಗಳು ಇತರೆ ವಸ್ತುಗಳಿಗೆ ಹಾನಿ ಉಂಟಾದಲ್ಲಿ ಗುತ್ತಿಗೆದಾರರೆ ತಮ್ಮ ಸ್ವಂತ ಖರ್ಚಿನಲ್ಲಿ ರಿಪೇರಿ ಮಾಡಿಸಿ ಸುಸ್ಥಿತಿಯಲ್ಲಿಡಬೇಕು.

6) ಸದರಿ ಗುತ್ತಿಗೆಯನ್ನು ಬೇರೆಯವರಿಗೆ ಒಳಬಾಡಿಗೆ/ಉಪಗುತ್ತಿಗೆ ನೀಡುವಂತಿಲ್ಲ. ಶೌಚಾಲಯದ ಕಟ್ಟಡದ ಮೇಲೆ ಯಾವುದೇ ಹಕ್ಕು ಮಂಡಿಸುವಂತಿಲ್ಲ.

7) ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ವ್ಯಕ್ತಿ/ಸಂಸ್ಥೆಗಳು ರೂ. 2000/- ಮುಂಗಡ ಹಣವನ್ನು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಕೋಲಾರ ರವರ ಹೆಸರಿನಲ್ಲಿ ಠೇವಣಿ ಇಡತಕ್ಕದ್ದು.

8) ಶೌಚಾಲಯಗಳಲ್ಲಿ ಸಾರ್ವಜನಿಕ ಉಪಯೋಗದಾರರಿಂದ ಈ ಕೆಳಕಂಡಂತೆ ಮಾತ್ರ ಶುಲ್ಕ ವಸೂಲಿ ಮಾಡತಕ್ಕದ್ದು. ಹೆಚ್ಚುವರಿ ಶುಲ್ಕ ವಸೂಲಿ ಮಾಡಿರುವ ಬಗ್ಗೆ ದೂರುಗಳು ಬಂದರೆ ಗುತ್ತಿಗೆಯನ್ನು ಯಾವುದೇ ಮುನ್ನೂಚನೆ ಇಲ್ಲದೆ ರದ್ದುಪಡಿಸಲಾಗುದು. ಎಂ ದು ತಿಳಿಯುವುದು..

ಅ) ಮೂತ್ರಕ್ಕೆ - ರೂ. 2/-

ಆ) ಶೌಚಾಲಯಕ್ಕೆ - ರೂ. 5/-

ಇ) ಅಂಗವಿಕಲರಿಗೆ ಮತ್ತು 5 ವರ್ಷಗಳ ಕೆಳಗಿನ ಮಕ್ಕಳಿಗೆ ಉಚಿತ

9) ಸದರಿ ಶೌಚಾಲಯದ ನಿರ್ವಹಣೆಗಾಗಿ ಪಾವತಿ ಮತ್ತು ಉಪಯೋಗಿಸುವ ಅಧಾರದ ಮೇರೆಗೆ ಶೌಚಾಲಯ ನಿರ್ವಹಿಸುವ ಸಂಸ್ಥೆಗಳು ಅಗತ್ಯ ಸಿಬ್ಬಂದಿಗಳನ್ನು ನೇಮಿಸುವ, ಶುಚಿತ್ವಕ್ಕೆ ಬೇಕಾಗುವ ಎಲ್ಲಾ ರೀತಿಯ ವಸ್ತುಗಳನ್ನು ತಮ್ಮ ಖರ್ಚಿನಲ್ಲಿ ಪೂರೈಸುವ ಷರತ್ತಿಗೊಳಪಟ್ಟು ಬಿಡ್ ಮೊತ್ತವನ್ನು ನಮೂದಿಸತಕ್ಕದ್ದು. ಅಗತ್ಯವಾದಲ್ಲಿ ಚರ್ಚೆಯ ನಂತರ ಗುತ್ತಿಗೆ ಪ್ರಕ್ರಿಯೆಯನ್ನು ಅಂತಿಮಗೊಳಿಸಲಾಗುವುದು.

10) ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ವ್ಯಕ್ತಿ/ಸಂಸ್ಥೆಗಳು ಶೌಚಾಲಯ ನಿರ್ವಹಣೆಗೆ ಹೆಚ್ಚು ಮಾಸಿಕ ಬಾಡಿಗೆ ಮೊತ್ತ ನಮೂದಿಸಿ ಸಲ್ಲಿಸುವ ಬಿಡ್ ನ್ನು ಅಖೈರುಗೊಳಿಸಲಾಗುವುದು..

11) ಯಶಸ್ವಿ ಬಿಡ್‌ಡ್ ದಾರರು ಮೇಲ್ಕಂಡ ಷರತ್ತು ಹಾಗೂ ನಿಬಂಧನೆಗಳನ್ನೊಳಗೊಂಡ ಗುತ್ತಿಗೆ ಕರಾರು ಒಪ್ಪಂದವನ್ನು ಮಾಡಿಕೊಳ್ಳಬೇಕಾಗುತ್ತದೆ.

ಭರ್ತಿ ಮಾಡಿದ ಟೆಂಡರುಗಳನ್ನು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಕೋಲಾರ ರವರ ವಿಳಾಸಕ್ಕೆ ಅಂತಿಮ ದಿನದೊಳಗಾಗಿ ನೊಂದಾಯಿತ ಅಂಚೆ ಮುಖಾಂತರ ಅಥವಾ ಖುದ್ದಾಗಿ ಸಲ್ಲಿಸಲು ತಿಳಿಸಿದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೋಲಾರ
Pr. District & Sessions Judge
Kolar.

ಪ್ರತಿಯನ್ನು ಈ ಕೆಳಕಂಡವರಿಗೆ ಮಾಹಿತಿಗಾಗಿ ಹಾಗೂ ಈ ಅಧಿಸೂಚನೆಯನ್ನು ತಮ್ಮ ಸೂಚನಾ ಫಲಕದಲ್ಲಿ ಪ್ರದರ್ಶಿಸಲು ಕಳು ಹಿಸಿದೆ.

01) ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿನ ನ್ಯಾಯಾಧೀಶರಿಗೆ.

02) ಆಯುಕ್ತರು, ನಗರಸಭೆ, ಕೋಲಾರ.

03) ಅಧ್ಯಕ್ಷರು, ವಕೀಲರ ಸಂಘ, ಕೋಲಾರ.

04) ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತಿ, ಕೋಲಾರ.

05) ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಕೋಲಾರ.

06) ಜಿಲ್ಲಾ ಗ್ರಂಥಾಲಯ, ಕೋಲಾರ.

07) ತಹಶೀಲ್ದಾರರು, ತಾಲ್ಲೂಕು ಕಛೇರಿ, ಕೋಲಾರ.

08) ಉಪನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಇಲಾಖೆ, ಕೋಲಾರ ರವರ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ,

09) ಈ ಕಛೇರಿಯ ನಗದು ಶಾಖೆ.

10) ಈ ಕಛೇರಿ ಕಂಪ್ಯೂಟರ್ ಶಾಖೆಗೆ ಜಿಲ್ಲಾ ನ್ಯಾಯಾಲಯದ ವೆಬ್ ಸೈಟಿನಲ್ಲಿ ಪ್ರದರ್ಶಿಸಲು.

11) ಅಧಿಸೂಚನೆ ಕಡತಕ್ಕೆ.

12) ಕಛೇರಿ ಪ್ರತಿ.